**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು**

**ಸೆಷನ್ಸ್ ಕೇಸ್ ನಂಬ್ರ 211/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಜಯಶ್ರೀ | ಪ್ರಾಸಾಃ 2 |
| ಗಂಡನ ಹೆಸರು | : | ಶ್ರೀಧರ | ಚಾಸಾಃ 2 |
| ಪ್ರಾಯ | : | 38 ವರ್ಷ | ದಿನಾಂಕಃ 11.11.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಬೀಡಿ ಕಟ್ಟುವ ಕೆಲಸ | |
| ವಾಸಸ್ಥಳ | : | ಬೈಲಬರಿ ಮನೆ , ಬಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ರವರನ್ನು ನೋಡಿ ಪರಿಚಯ ಇದೆ, ಅವರು ನಮ್ಮ ಊರಿನವರು. ಚಾಸಾ-3 ನನ್ನ ಗಂಡನ ಅಕ್ಕ. ವಿ.ಸಿ ಮೂಲಕ ಹಾಜರುಪಡಿಸಿರುವ ಆರೋಪಿಯ ಪರಿಚಯ ಇರುತ್ತದೆ. ಆರೋಪಿ ನಮ್ಮ ಮನೆಯ ಹತ್ತಿರದವರು. ನಮ್ಮ ಮನೆಯ ಹತ್ತಿರ ಕೊರಗಲ್ಲು ಕೊರಗಜ್ಜ ಎಂಬ ದೈವದ ಕಟ್ಟೆ ಇರುತ್ತದೆ. ನಮ್ಮ ಊರಿನ ಹರೀಶ್ ಪೂಜಾರಿರವರು ಸದರಿ ದೈವದ ಕಟ್ಟೆಯಲ್ಲಿದ್ದ ಕೊರಗಜ್ಜ ಕಲ್ಲನ್ನು ತಮಗೆ ಸೇರಿದ್ದು ಎಂದು ಹೇಳಿ, ಅವರ ಮನೆಯ ಹತ್ತಿರ ಪ್ರತಿಷ್ಠಾಪನೆ ಮಾಡಿರುತ್ತಾರೆ. ನಾನು ಊರಿನವರೆಲ್ಲಾ ಹಿಂದೆ ಇದ್ದ ಸ್ಥಳದಲ್ಲೇ ಕೊರಗಜ್ಜನ ಕಲ್ಲನ್ನು ಸ್ಥಾಪಿಸಿ ಪೂಜೆ ಮಾಡುತ್ತಿದ್ದೆವು. ಸದರಿ ಕೊರಗಜ್ಜನ ಕಟ್ಟೆಯ ಮೇಲೆ ತಾತ್ಕಾಲಿಕವಾಗಿ ತೆಂಗಿನ ಗರಿಗಳನ್ನು ಹಾಕಿ ಟರ್ಪಲ್ ಹೊದಿಸಲಾಗಿತ್ತು.

2. ದಿನಾಂಕ 11.07.2023 ರಂದು ನಾನು ಮತ್ತು ಚಾಸಾ-3 ರವರು ವೇಣೂರು ಪೇಟೆಗೊಂದು ಹೋಗಲು ಕೊರಗಲ್ಲು ಕೊರಗಜ್ಜನ ಕಟ್ಟೆಯ ಹತ್ತಿರ

ಮಾರ್ಗದ ಬದಿಯಲ್ಲಿ ಬಸ್ಸಿಗಾಗಿ ಕಾಯುತ್ತಿರುವಾಗಿ ಆರೋಪಿ ಸಿಕ್ಕಿದ್ದು, ಅವರು ನಮ್ಮನ್ನು ಉದ್ದೇಶಿಸಿ, ಕೊರಗಜ್ಜನ ಕಟ್ಟೆ ನಿಮ್ಮ ಅಪ್ಪನದ್ದಲ್ಲ ಮತ್ತು ಊರಿನವರದಲ್ಲ, ನನ್ನ ಅಪ್ಪನದ್ದು ಎಂದು ಹೇಳಿ, ಕೊರಗಜ್ಜನ ಕಟ್ಟೆಯಲ್ಲಿ ಉರಿಯುತ್ತಿದ ಹಣತೆಯ ದೀಪದಿಂದ ಕಟ್ಟೆಯ ಮೇಲೆಅಳವಡಿಸಿದ್ದ ಚಪ್ಪರ ಮತ್ತು ಪ್ಲಾಸ್ಟಿಕ್ ಟರ್ಪಲ್ ಗೆ ಬೆಂಕಿ ಇಟ್ಟಿರುತ್ತಾರೆ. ನಾವು ಆರೋಪಿಯನ್ನು ಉದ್ದೇಶಿಸಿ ಬೆಂಕಿ ಹಾಕಬೇಡಿ ಎಂದು ಹೇಳಿದ್ದಕ್ಕೆ ಅದು ಊರಿನವರದಲ್ಲ ನಮ್ಮದು ಎಂದು ಆರೋಪಿ ಹೇಳಿರುತ್ತಾರೆ. ಆಗ ನಾನು ವಿವೋ ಕಂಪನಿಯ ನನ್ನಮೊಬೈಲ್ ನಲ್ಲಿ ಅದರ ವಿಡಿಯೋ ರೆಕಾರ್ಡಿಂಗ್ ಮಾಡಿರುತ್ತೇನೆ. ಸದರಿ ಘಟನೆಯನ್ನು ನಾವು ಪೋಲಿಸರಿಗೆ ತಿಳಿಸಿರುತ್ತೇವೆ. ನಂತರ ವೇಣೂರಿನಲ್ಲಿರುವ ಸುದೀಶ್ ಸ್ಟುಡಿಯೊಗೆ ಹೋಗಿ, ನನ್ನ ಮೊಬೈಲನ್ನು ಅದರ ಮಾಲೀಕರಾದ ಸುದೀಶ್- ಚಾಸಾ-9 ರವರಿಗೆ ನೀಡಿದ್ದು, ಅವರು ಕಂಪ್ಯೂಟರ್ ಮೂಲಕ ಸಿಡಿ ಗೆ ವರ್ಗಾಯಿಸಿರುತ್ತಾರೆ. ಸದರಿ ಸಿಡಿಯನ್ನು ನಾನು ದಿನಾಂಕ 10.08.2023 ರಂದು ಪೋಲಿಸ್ ಠಾಣೆಗೆ ನೀಡಿರುತ್ತೇನೆ. ಪೋಲಿಸರು ಸದರಿ ಸಿಡಿಯನ್ನು ವೀಕ್ಷಿಸಿ, ಮಹಜರು ಮೂಲಕ ವಶಪಡಿಸಿಕೊಂಡಿರುತ್ತಾರೆ. ಆರೋಪಿ ಪರ ವಕೀಲರು ಮಹಜರನ್ನು ತಕರಾರಿಗೆ ಒಳಪಟ್ಟು ಗುರುತಿಸಲು ಹೇಳುತ್ತಾರೆ. ಅದು ಕಾನೂನಾತ್ಮಕವಾದ ಕ್ರಮ ಅಲ್ಲದ ಕಾರಣ, ಅವರ ತಕರಾರನ್ನು ತಳ್ಳಿಹಾಕಲಾಯಿತು. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು **ನಿಪಿ-6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ 65ಬಿ ಪ್ರಮಾಣ ಪತ್ರವನ್ನು **ನಿಪಿ-7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-7(ಎ)** ಎಂದು ಗುರುತಿಸಲಾಯಿತು. ನಾನು ಈ

ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಿಡಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ.

3. ನ್ಯಾಯಾಲಯದ ಅನುಮತಿ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನಿಪಿ-5 ರ ಸಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ, ಸದರಿ ಸಿಡಿಯ 3ನೇ ದೃಶ್ಯಾವಳಿಯಲ್ಲಿ ಕಾಣುವ ವ್ಯಕ್ತಿ ಆರೋಪಿ ಹರೀಶ್ ಪೂಜಾರಿ ಎಂದು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಕೆ ವಕೀಲರಿಂದ</u>**

4. ಘಟನೆಯನ್ನು ಪೋಲಿಸರಿಗೆ ಹೇಳಿದ ಕೂಡಲೇ ಅವರು ಸ್ಥಳಕ್ಕೆ ಬಂದಿರುತ್ತಾರೆ. ಎಷ್ಟು ಮಂದಿ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ನಾನು ಲೆಕ್ಕ ಮಾಡಿರುವುದಿಲ್ಲ. ಪೋಲಿಸರು ಸಂಜೆಯವರೆಗೆ ಸ್ಥಳದಲ್ಲಿ ಇದ್ದರು. ಪೋಲಿಸರು ಸ್ಥಳದಲ್ಲಿ ನನ್ನ ಹೇಳಿಕೆಯನ್ನು ಬರೆದಿರುತ್ತಾರೆ. ನಾನು ಅದಕ್ಕೆ ಸಹಿ ಮಾಡಿದ್ದೀರಾ ಎಂದರೆ ಮಾಡಿರಬಹುದು, ನೆನಪಿಲ್ಲ. ನಾನು ಠಾಣೆಗೆ ಮರುದಿನ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ನಾನು ಚಿತ್ರೀಕರಣ ಮಾಡಿದ ಮೊಬೈಲನ್ನು ಪೋಲಿಸರಿಗೆ ನೀಡಿರುತ್ತೇನೆ.

5. ಕೊರಗಜ್ಜ ಕಟ್ಟೆಯ ವಿವಾದ ಘಟನೆಯ ಎಷ್ಟು ವರ್ಷದ ಹಿಂದಿನಿಂದ ಉಂಟು ಎಂದರೆ ಹಿಂದಿನಿಂದ ಉಂಟು, ಎಷ್ಟು ವರ್ಷಗಳಿಂದ ಎಂದು ನೆನಪಿಲ್ಲ. ನೀವು ಪೋಲಿಸ್ ಠಾಣೆಯಲ್ಲಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ತನಕ ಇದ್ದೀರಿ ಎಂದರೆ ಮದ್ಯಾಹ್ನ ತನಕ ಇದ್ದೆ, ಸಮಯ ನೆನಪಿಲ್ಲ. ನಾನು ಮತ್ತು ಚಾಸಾ-3 ರವರು ಠಾಣೆಗೆ ಹೋಗಿರುತ್ತೇವೆ.

6. ನಾನು ಕೊರಗಜ್ಜ ಕಟ್ಟೆಯ ವಿವಾದದಲ್ಲಿ ಎರಡು ಬಣ ಉಂಟಾ ಎಂದರೆ ಊರಿನಲ್ಲಿರುವ ಹರೀಶ್ ಎನ್ನುವವರು ಬಣ ಮಾಡಿರುತ್ತಾರೆ, ಇನ್ನೊಂದು ಬನ ಊರಿನವರದ್ದು. ನೀವು ಹರೀಶ್ ನವರ ಬಣದಲ್ಲಿ ಗುರುತಿಸಿಕೊಂಡಿರುತ್ತಿರೋ ಅಥವಾ ಊರಿನವರ ಬಣದಲ್ಲೋ ಎಂದರೆ ನಮಗೆ ಯಾವುದೇ ಬಣ ಇಲ್ಲ, ನಾವು ಊರಿನವರೊಂದಿಗೆ ಇರುವುದಾಗಿ ನುಡಿಯುತ್ತಾರೆ. ಕೊರಗಜ್ಜ ಕಟ್ಟೆಯ ವಿವಾದ ಆ ಸಮಯದಲ್ಲಿ ಟಿ.ವಿಯಲ್ಲಿ ಮತ್ತು ಮೊಬೈಲ್ ನಲ್ಲಿ ಪ್ರಸಾರವಾಗುತ್ತಿತ್ತು.

7. ನಾನು ಮೊದಲಿನಿಂದ ಕೊನೆಯತನಕ ಘಟನೆಯ ಚಿತ್ರೀಕರಣವನ್ನು ಮಾಡಿರುತ್ತೇನೆ. ನಾನು ಬಸ್ ಬರುವ ಮಾರ್ಗದ ಒಂದು ಕಡೆ ನಿಂತು ಚಿತ್ರೀಕರಣ ಮಾಡಿರುತ್ತೇನೆ. ನೀವು ಮಾತನಾಡಿದ ವಿಚಾರಗಳು ವಿಡಿಯೋದಲ್ಲಿ ರೆಕಾರ್ಡ್ ಆಗಿದಾ ಎಂದರೆ ಇರಬಹುದು.

8. ಆರೋಪಿ ಹರೀಶ್ ಪೂಜಾರಿರವರ ತಂದೆಯವರ ಪರಿಚಯ ನನ್ನ ಗಂಡನಿಗೆ ಇದೆ, ನನಗೆ ಇರುವುದಿಲ್ಲ. ನಮ್ಮ ಮನೆಯಲ್ಲಿ ನನ್ನಗಂಡ, ಮಕ್ಕಳು ಮತ್ತು ಅತ್ತೆ ವಾಸವಿರುತ್ತೇವೆ. ನನ್ನ ಮಾವನವರಿಗೆ 3 ಜನ ಮಕ್ಕಳು ಅವರುಗಳು ಶ್ರೀಧರ , ನಾರಾಯಣ ಮತ್ತು ವಸಂತಿ. ವಸಂತಿಯವರ ಗಂಡನ ಹೆಸರು ವಸಂತ. ವಸಂತರವರ ತಂದೆಯ ಹೆಸರು ನನಗೆ ತಿಳಿದಿಲ್ಲ. ವಸಂತಿ ಮತ್ತು ನಿಮ್ಮ ಮನೆಯವರೆಲ್ಲಾ ವಿವಾದದಲ್ಲಿ ಬಣ ಕಟ್ಟಿಕೊಂಡವರು ಎಂದರೆ ಅದು ಹೇಗೆ ಆಗುತ್ತದೆ, ನಾವು ಊರಿನವರೊಡನೆ ಸೇರಿರುತ್ತೇವೆ, ಅದು ಊರಿಗೆ ಸಂಬಂಧಪಟ್ಟದ್ದು ಎಂದು ನುಡಿಯುತ್ತಾರೆ. ನಾವು ಸದರಿ ದೈವಕ್ಕೆ ಹರಕೆಯನ್ನು

ಯಾರ ಕೈಯಲ್ಲಿ ಕೊಡುತ್ತಿದ್ದಿರಿ ಎಂದರೆ ನಮ್ಮ ಅತ್ತೆಯವರು ಕೊಡುತ್ತಿದ್ದರು, ಆಗ ನಾನು ಹೋಗುತ್ತಿರಲಿಲ್ಲ.

9. ಆರೋಪಿ ಹರೀಶ್ ಪೂಜಾರಿಯವರ ಮನೆಯ ಜಾಗವನ್ನು ನೋಡಿರುತ್ತೀರಾ ಎಂದರೆ ಹೌದು. ಅವರ ಮನೆಯ ಜಾಗದ ಸುತ್ತ ಮಣ್ಣಿನ ಕಂಪೌಂಡು ಇರುತ್ತದೆ ಎಂದರೆ ಆಗ ಇತ್ತು, ಈಗ ಇಲ್ಲ. ಸಾರ್ವಜನಿಕರಿಗೆ ಓಡಾಡಲು ಮೇಲ್ಗಡೆಯಿಂದ ಆರೋಪಿಯ ಮನೆಯ ಕಂಪೌಂಡಿನ ಹೊರಗಡೆಯಿಂದ ಮಾರ್ಗ ಇರುತ್ತದೆ ಎಂದರೆ ಸರಿ. ಸದರಿ ಮಾರ್ಗವು ಆರೋಪಿಯ ಮನೆಯ ಎದುರಿಗೆ ಬರುವ ಜಾಗದ ಕಂಪೌಂಡಿನ ಹೊರಬಾಗದ್ದು ಆಗಿರುತ್ತದೆ. ಸದರಿ ಮಾರ್ಗ ಆರೋಪಿಯ ಮನೆಯಿಂದ 100 ಮೀ ಅಂತರದಲ್ಲಿ ಇರುತ್ತದೆ. ಸದರಿ ಮಾರ್ಗದಿಂದ ಮುಖ್ಯ ಡಾಮರು ರಸ್ತೆಗೆ ಹೋಗಲು ಆಗುತ್ತದೆ. ನಾನು ಡಾಮರು ರಸ್ತೆಯಲ್ಲಿ ನಿಂತು ವಿಡಿಯೋ ತೆಗೆದಿದ್ದೇನೆ ಎಂದು ಪೋಲಿಸರಿಗೆ ಹೇಳಿರುತ್ತೇನೆ ಮತ್ತು ಅದು ವಿಡಿಯೋದಲ್ಲಿ ಕಾಣುತ್ತದೆ. ಸದರಿ 100 ಮೀ ಅಂತರದಲ್ಲಿರುವ ಮಾರ್ಗ ಎತ್ತರ ಪ್ರದೇಶದಲ್ಲಿ ಇದೆ.

10. ನೀವು ಹಾಜರುಪಡಿಸಿದ ನಿಪಿ-5 ರ ಸಿಡಿಯ ನಿಪಿ-5(ಎ) ಯಿಂದ (ಡಿ) ರಲ್ಲಿ ಕಾಣುವ ದೃಶ್ಯಾವಳಿಗಳಲ್ಲಿ ಆರೋಪಿಯು ಬೆಂಕಿ ಇಡುತ್ತಿರುವ ದೃಶ್ಯ ಇರುವುದಿಲ್ಲ ಎಂದರೆ ಇದೆ. ನಾನು ವಿಡಿಯೋ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವಿಡಿಯೋ ಕೇಸಿಗೋಸ್ಕರ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ

ಬಣದವರೆಲ್ಲರೂ ಸೇರಿಕೊಂಡು ವಿಡಿಯೋವನ್ನು ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ದೂರು ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ಚಾಸಾ-3 ರವರಗಾಲೀ ಬೆಂಕಿಯನ್ನು ನಂದಿಸಲು ಪ್ರಯತ್ನ ಪಟ್ಟಿರುವುದಿಲ್ಲ, ನಾವು ಅದರ ಹತ್ತಿರ ಹೋಗಿರುವುದಿಲ್ಲ.

11. ನಾನು ಕೊರಗಜ್ಜನ ಕಟ್ಟೆಗೆ ತಾತ್ಕಾಲಿಕ ಚಪ್ಪರ ಹಾಕಲು ಹೋಗಿರುವುದಿಲ್ಲ, ಊರಿನವರೆಲ್ಲರೂ ಸೇರಿ ಚಪ್ಪರ ಹಾಕಿರುತ್ತಾರೆ, ಅವರು ಯಾರು ಎಂದು ನೆನಪಿಲ್ಲ. ಸದರಿ ಘಟನೆಯ ಎಷ್ಟು ಪೂರ್ವದಲ್ಲಿ ಚಪ್ಪರ ಹಾಕಲಾಗಿದೆ ಎಂದರೆ ನೆನಪಿಲ್ಲ. ಚಪ್ಪರ ಹಾಕಲು ಸರ್ಕಾರದಿಂದ ಅನುಮತಿ ಪಡೆದಿತ್ತಾ ಎಂದರೆ ನನಗೆ ತಿಳಿದಿಲ್ಲ. ಸದರಿ ಘಟನೆಯ ಎಷ್ಟು ಪೂರ್ವದಲ್ಲಿ ನಮ್ಮ ಊರಿನ ಹರೀಶ್ ಪೂಜಾರಿರವರು ಸದರಿ ದೈವದ ಕಟ್ಟೆಯಲ್ಲಿದ್ದ ಕೊರಗಜ್ಜ ಕಲ್ಲನ್ನು ತಮಗೆ ಸೇರಿದ್ದು ಎಂದು ಹೇಳಿ, ಅವರ ಮನೆಯ ಹತ್ತಿರ ಪ್ರತಿಷ್ಟಾಪನೆ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಸದರಿ ಕೊರಗಜ್ಜ ಕಲ್ಲನ್ನು ತೆಗೆದುಕೊಂಡು ಹೋದ ಜಾಗದಲ್ಲಿ ಊರಿನವರು ಪ್ರತಿಷ್ಟಾಪನೆ ಆಗ ಮಾಡಿರುತ್ತಾರಾ ಎಂದರೆ ಇಲ್ಲ, ನಂತರದಲ್ಲಿ ಮಾಡಿರುತ್ತಾರೆ. ಮುಂದುವರಿದು ಹೋದ ವರ್ಷ ಮಾಡಿರುವುದಾಗಿ ನುಡಿಯುತ್ತಾರೆ. ಊರಿನ ಬಣದವರು ಅವರ ಹಕ್ಕು ಸ್ಥಾಪನೆ ಮಾಡುವ ಸಲುವಾಗಿ ಸದರಿ ಪ್ರಕರಣವನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

12. ನನಗೆ ಸದರಿ ದಿನದಂದು ಆರೋಪಿ ನನಗೆ ಸಿಕ್ಕಿದ್ದು ನನ್ನ ಹತ್ತಿರ ಮಾತನಾಡಿದ್ದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಿನ ಮಾರ್ಗದಿಂದ ನಾನು ನಿಂತಿರುವ ಡಾಮರು ಜಾಗಕ್ಕೆ ಕೊರಗಜ್ಜ ಕಟ್ಟೆ ಕಾಣುವ ಸಾದ್ಯತೆ ಇಲ್ಲ ಎಂದರೆ ಸರಿಯಲ್ಲ. ನಾವು ಆರೋಪಿ ಹರೀಶ್ ರವರ ಕಂಪೌಂಡಿನ ಒಳಗಿನಿಂದ ಹೋಗಿ ಬಸ್ ನಿಲ್ಲುವ ಜಾಗಕ್ಕೆ ಹೋಗಿ ಬಸ್ ನಲ್ಲಿ ಹೋಗುತ್ತೇವೆ. ನಾನು ಹಾಜರುಪಡಿಸಿರು ವಿಡಿಯೋದಲ್ಲಿ ಯಾವುದೇ ರಸ್ತೆ ಅಥವಾ ದಾರಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ.

13. ಊರಿನ ಹರೀಶ್ ಪೂಜಾರಿಯವರು ಕೊರಗಜ್ಜ ಕಲ್ಲನ್ನು ತೆಗೆದುಕೊಂಡು ಹೋಗುವಾಗ ಮೇಲಿನ ಛಾವಣಿಯನ್ನು ಎಳೆದು ಹೋಗಿರುತ್ತಾರೆ ಎಂದು ಊರಿನವರು ಹೇಳಿರುತ್ತಾರೆ, ನನಗೆ ಸ್ವಯಂ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಉರಿಯುತ್ತಿರುವ ಹಣತೆ ದೇವರ ಎದುರು ಇಟ್ಟಿರುವುದನ್ನು ನೋಡಿರುತ್ತೇನೆ. ಸದರಿ ಹಣತೆಯನ್ನು ಆರೋಪಿ ಇಡುತ್ತಿದ್ದರು, ಪ್ರತಿದಿನ ಅವರೇ ಇಡುತ್ತಿದ್ದರು. ನಾನು ಊರಿನ ಬಣದವರೊಂದಿಗೆ ಸೇರಿಕೊಂಡು ಆರೋಪಿ ಬೆಂಕಿ ಹಾಕಿರುತ್ತಾರೆ ಎಂದು ಸುಳ್ಳು ವಿಚಾರ ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಡಾಮರು ಮಾರ್ಗದ ಬದಿಯಲ್ಲಿ ನಿಂತು ವಿಡಿಯೋ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಸ್ಟುಡಿಯೋದವರ ಬಳಿ ನನ್ನ ಮೊಬೈಲ್ 2-3 ಗಂಟೆಗಳ ಕಾಲ ಇತ್ತು. ನಾನು ಮೊಬೈಲನ್ನು ಗಣೇಶ್ ರವರ ಕೈಗೆ ಕೊಟ್ಟಿರುತ್ತೇನೆ. ಅವರ ಪರಿಚಯ ನನಗೆ

ನನ್ನ ಗಂಡ ಶ್ರೀಧರರರವರಿಂದ ಆಗಿರುತ್ತದೆ. ನಾನು ಹೇಳಿದೆಲ್ಲಾ ಸಂಪೂರ್ಣ ಕಪೋಲ ಕಲ್ಪಿತ ಕತೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.